ಸದಾಶಿವ ಸೊರಟೂರು, ದಾವಣಗೆರೆಯ ಹೊನ್ನಾಳಿ ತಾಲ್ಲೂಕಿನವರು. ವೃತ್ತಿಯಲ್ಲಿ ಶಿಕ್ಷಕರು. ಬರವಣಿಗೆಯಲ್ಲಿ ಸದಾ ನಿರತರು. 'ಹೆಸರಿಲ್ಲದ ಬಯಲು', 'ಕನಸುಗಳಿವೆ ಕೊಳ್ಳುವವರಿಲ್ಲ', 'ಹೊಸ್ತಿಲಾಚೆ ಬೆತ್ತಲೆ', 'ತೂತು ಬಿದ್ದ ಚಂದಿರ' ಅವರ ಪ್ರಮುಖ ಕೃತಿಗಳು.

ಬಂದ ಸಣ್ಣೀರನಿಗೆ ಪಕ್ಕದೂರು ಮಾದ್ನಳ್ಳಿಯಿಂದ ಸಾವಿತ್ರಿ ತಂದು ಮದುವೆ ಮಾಡಿ ಅವರಪ್ಪ ಸಣ್ಣಪ್ಪ ಕಣ್ಮುಚ್ಚಿದ್ದ. ನೀಳ ಮೂಗು, ದುಂಡು ಮೊಖ, ಚೆಂಡು ಮೊಲೆ, ಸಣ್ಣ ನಡುವು, ಉದ್ದ ಕೂದ್ಲಿನ ಎಣ್ಣೆಗೆಂಪು ಬಣ್ಣದ ಸಾವಿತ್ರೀನ ಸಣ್ಣೀರ ಬಹುಮೆಚ್ಚಿಕೊಂಡಿದ್ದ. ಹೊಲಗೇರಿಯ ಗೂಡಿನಂತಹ ಮನೇಲಿ ಸಣ್ಣೀರ ಮತ್ತು ಸಾವಿತ್ರಿಯ ಬದುಕು ಬಿಚ್ಚಿಕೊಂಡಿತ್ತು.

ಸಣ್ಣೀರನ ಜತೆ ಸಾವಿತ್ರಿನು ಪಟೇಲರ ಹೊಲಕ್ಕೆ ಕ್ಯಾಮೆಗೆ ಹೋಗುತ್ತಿದ್ದಳು. ಸಣ್ಣೀರನಿಗೆ ಪಟೇಲರ ಹೊಲ ಅಲ್ಲದೆ ಬೇರೆ ಕಡೆಯಾದರೂ ಎಲ್ಲಿ ಕೆಲಸ ಇತ್ತು. ಪಟೇಲರೆಂದರೆ ತಲೆ ಮೇಲಿನ ಟವಾಲು ತೆಗೆದು ಕೈಯ್ಯಲ್ಲಿ ಹಿಡಿದು ನಡು ಬಗ್ಗಿಸುವ ಕಾಯಕ ಅವರಪ್ಪ ಸಣ್ಣಪ್ಪನಿಂದ ಮಗನಿಗೂ ಹರಿದು ಬಂದಿತ್ತು. ನೂರಾರು ಎಕರೆಯ ಪಟೇಲರೇ ಊರಿನ ಬಹುಪಾಲು ಜನರ ಕೈಗೆ ಕೆಲಸ, ಹೊಟ್ಟೆಗೆ ಗಂಜಿ ಕರುಣಿಸುವ ಅನ್ನದಾತರಾಗಿದ್ದರು.

ಅವೊತ್ತೊಂದಿನ ಹೊಲಕ್ಕೆ ಬಂದ ಪಟೇಲಪ್ಪ ಸಾವಿತ್ರಿಯನ್ನು ಹಿಂದಿನಿಂದ ನೋಡಿಯೇ ಕಣ್ಣರಳಿಸಿದ್ದ. ನಡು ಸಣ್ಣಗಿನ ಹೆಂಗಸು ಯಾರೀಕೆ ಎಂದು ಮನಸ್ಸಲೇ ಯೋಚಿಸಿದ್ದ. ಸಣ್ಣೀರನನ್ನು ಕರೆದು 'ಯಾರ‍್ಲೆ ಇದು? ಹೊಸ ಹೆಂಗಸು ಕೂಲಿಗೆ ಬಂದಿರೋದು?' ಅಂತ ಕೇಳಿದಾಗ ಸಣ್ಣೀರು ಹಲ್ಲುಗಿಂಜುತ್ತ 'ನಮ್ ಹೆಂಡ್ರು ಬುದ್ದಿ' ಎಂದು ನಡು ಬಗ್ಗಿಸಿ ಹೇಳಿದ್ದ. ಮುಂದಿನಿಂದ ಸಾವಿತ್ರಿಯ ರೂಪ ನೋಡಿ ಲೋಟದಷ್ಟು ಜೊಲ್ಲು ಸುರಿಸಿದ್ದ. ಹೊಲೇರ ಕೇರಿ ಹೆಂಗಸ್ರನ್ನ, ಲಿಂಗಾಯಿತರ ಬೀದಿ ಹೆಂಗಸ್ರನ್ನ ಹೊಲ್ದಾಗೆ ಮಿಷನ್ನಿನ ಮನೀಗೆ ಎಳ್ಕೊಂಡು ಸುಖವುಂಡು ಕೈಬಿಟ್ಟದ್ದ. ಊರಿನಲ್ಲಿ ಇದರ ಗುಸುಗುಸು ಇದ್ದರೂ ಯಾರೂ ಕೂಡ ಪಟೇಲಪ್ಪನ ಮುಂದೆ ಆ ಮಾತೆತ್ತಿ ಉಳಿಯಂಗಿರ್ಲಿಲ್ಲ. ಮಾಡೋರು ಮಾಡ್ಕೊಳ್ಳೊರು ನಡ್ವೆ ನಮ್ದು ಎಂತದೊ ಅಂದ್ಕೊಂಡು ಸುಮ್ಮನಾಗಿದ್ದರು. ಸಾವಿತ್ರಿನ ನೋಡಿದ್ದೆ ಪಟೇಲಪ್ಪನಿಗೆ ಮನಸ್ಸು ಕಲಕಿ ಹೋಗಿತ್ತು. ಒಂದು ಸಮಯಕ್ಕೆ ಹೊಂಚಾಕೊಂಡು ಕಾಯುತ್ತಿದ್ದ.

ಈ ಮಧ್ಯೆ ಸಾವಿತ್ರಿ ಬಸುರಿ ಅಂತ ಗೊತ್ತಾಗಿ ಪಟೇಲಪ್ಪ ಕೈಕೈ ಹಿಸ್ಕೊಂಡಿದ್ದ. ಬಸುರಿ ಹೆಂಡತಿನ ಸಣ್ಣೀರ ಮನೆಯಾಗ ಬಿಟ್ಟು ತಾನೊಬ್ನೆ ಕೆಲ್ಸಕೆ ಹೋಗಾಕಿಡಿದ. ಅವನ ಕೆಲಸದಾಗೆ ಒಂದು ಹೊಸ ಹುರುಪು ಬಂದಿತ್ತು. ಅಪ್ಪ ಆಗುವ ಹೊಸ ಕನಸು ಹೊತ್ತುಕೊಂಡು ಬಿಸಿಲು ಸೋಲುವಂತೆ ಹೊಲದಲ್ಲಿ ದುಡಿಯುತ್ತಿದ್ದ. ರಾತ್ರಿ ಮನೆಗೆ ಬಂದು ಸಾವಿತ್ರಿ ತೊಡೆ ಮೇಲೆ ಮಲಗಿ ಮಗುವಿನ ಕುರಿತಾದ ಕನಸುಗಳನ್ನು ಹೆಣೆಯುತ್ತಿದ್ದ. ಅವಳ ಹೊಟ್ಟೆಯನ್ನು ಸವರುತ್ತಾ, ಸಾವಿತ್ರಿಯೊ? ಸಣ್ಣೀರನೊ? ಎಂದು ಕೇಳಿ ಕೇಳಿ ಹೆಂಡತಿಯನ್ನು ಮುದ್ದು ಮಾಡುತ್ತಿದ್ದ. ಸಾವಿತ್ರಿ ನಾಚಿ ಮಾತಿಲ್ಲದೆ ಸಣ್ಣೀರನನ್ನು ತಬ್ಬಿಬಿಡುತ್ತಿದ್ದಳು. ಗುಡಿಸಲು ಅವರಿಬ್ಬರ ಪ್ರೀತಿಯನ್ನು ಕದ್ದು ನೋಡದೆ ಕಣ್ಮುಚ್ಚಿಕೊಳ್ಳುತ್ತಿತ್ತು. ಒಡೆದ ಹೆಂಚಿನ ಕಿಂಡಿಯಿಂದ ಇಣುಕುತ್ತಿದ್ದ ಚಂದ್ರ ಸುಖವಾಗಿ ನಗುತ್ತಿದ್ದ.

ಈಗೀಗ ಪಟೇಲಪ್ಪ ಸಣ್ಣೀರನ ಬಗ್ಗೆ ಬಹಳ ಕಾಳಜಿ ತೋರಿಸತೊಡಗಿದ. ಹೊಲದಿಂದ ಪಟೇಲ್ರ ಮನೆಗೆ, ಅಲ್ಲಿಂದ ಸಾರಾಯಿ ಅಂಗಡಿಗೆ, ಅಲ್ಲಿಂದ ತೂರಾಡುತ್ತ ಮನೆಗೆ – ಇವು ಸಣ್ಣೀರನ ಸಂಜೆಯ ನಡಾವಳಿಗಳಾಗಿದ್ದವು. ಟವಲು ಕೈಯಲ್ಲಿಡಿದು 'ಬುದ್ಧಿ ಖುಷಿಗೆ ಏನಾರ...' ಎಂದು ರಾಗ ಎಳೆದು ತಲೆ ಕೆರೆದುಕೊಳ್ಳುತ್ತಾ ನಡುಬಗ್ಗಿಸಿ ಹಲ್ಲು ಗಿಂಜುತ್ತಿದ್ದ. ಈಗೀಗ ಅವನ ಸಾರಾಯಿ ಲೆಕ್ಕ ಎರಡು ಪಾಕೆಟಿನಿಂದ ಐದಾರು ಪಾಕೆಟ್ಗೆ ಏರಿತ್ತು. ಸಾರಾಯಿಗೆ ಪಟೇಲಪ್ಪ ಧಾರಾಳವಾಗಿ ಕಾಸು ಕೊಡತೊಡಗಿದ. ಪಟೇಲರೇ ಕೊಡುವಾಗ ತನ್ನದೇನೆಂದು ಸಣ್ಣೀರ ದಿನೇ ದಿನೇ ತನ್ನ ಕುಡಿತದ ತಲುಬು ಹೆಚ್ಚಿಸಿಕೊಂಡಿದ್ದ. ಸಾರಾಯಿ ಅಂಗಡಿಯಲ್ಲಿ ಹೊಟ್ಟೆ ತುಂಬಾ ಕುಡಿದು ಯಾವುದೊ ಹೊತ್ತಿಗೆ ಮನೆ ಸೇರುತ್ತಿದ್ದ.

ಈ ನಡುವೆ ಸಾವಿತ್ರಿ ಸರ್ಕಾರಿ ಆಸ್ಪತ್ರೇಲಿ ಗಂಡು ಮಗು ಹೆತ್ತಳು. ಅವತ್ತು ಸಣ್ಣೀರ ಏಳಲಾರದಷ್ಟು ಕುಡಿದಿದ್ದ. ಹೊಲಗೇರಿಯಲ್ಲಿ ಬಿದ್ದು ಹೊರಳಾಡಿ ತನ್ನ ಖುಷಿಯನ್ನು ಹೊರಹಾಕಿದ್ದ. ಹುಟ್ಟಿದ ಮಗು